ಅಧ್ಯಕ್ಷರು.– ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. Minister reprents to the Speaker that the subject matter of the question is one of the subjects of public interest or the Member represents to the Speaker that the question is of public interest and the Minister indicates his willingness to answer the question on a rare occasion the Question Hour may collapse before time,' ಇದು ಇದ್ದರೂ ಕೂಡ ಒಂದೊಂದು ಸಲ ಪ್ರಶ್ನೆಗಳು ೧ ಗಂಟೆಗಿಂತ ಮುಂಚೆ ಮುಗಿದು ಹೋಗತಕ್ಕ ಸಂದರ್ಭವುಂಟು.

ಇದರ ಬಗ್ಗೆ ನಿರ್ವಾಹಕವಿಲ್ಲದೇ ಮಾಡಬೇಕೇ ವಿನಾ, ದಯವಿಟ್ಟು ಈ ವಿಚಾರದಲ್ಲಿ ತಾವುಗಳು ಏನಾ ಒಂದು ನಿರ್ಣಯ ಕೊಟ್ಟಿದ್ದೀರಿ ಅದಕ್ಕೆ ನಾನೂ ಸಹ ಬದ್ಧನಾಗಿದ್ದೇನೆ. ಇದು ಅತ್ಯಂತ ಪ್ರಮುಖವಾದ ಪ್ರಶ್ನೆ. ಕಳೆದು ಹೋಯಿತಲ್ಲವೆ ಇದಕ್ಕೆ ಮಾನ್ಯ ಮಂತ್ರಿಗಳಿಂದ ಉತ್ತರ ಸಿಗುವುದಕ್ಕೆ ಸಾಧ್ಯವಾಗಲಿಲ್ಲಾ ಎನ್ನುವ ಕಳಕಳಿ ನನಗೂ ಇದೆ. ಅದಕ್ಕೆ ನಾನೂ ಸಹ ಪಾಲುಗಾರನಾಗಿದ್ದೇನೆ. ಆದುದರಿಂದ ಮುಂದಿನ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಈ ವಿಷಯವನ್ನು ತೆಗೆದುಕೊಂಡು ಇದನ್ನು ಮುಗಿಸೋಣ.

ಶ್ರೀ ಪಂಪಾಪತಿ.– ಸ್ವಾಮಿ, ಈಗಾಗಲೇ ೨೦ ನಿಮಿಷ ಕಳೆದು ಹೋಯಿತು. ಇಷ್ಟು ಹೊತ್ತಿಗೆ ಅವನ್ನೆಲ್ಲಾ ಮುಗಿಸಬಹುದಾಗಿತ್ತು.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳು ಮತ್ತು ಲಿಖಿತ ಉತ್ತರಗಳು

(ನಗರಾಡಳಿತ ನಿರ್ದೇಶನಾಲಯ ರಚನೆ)

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳ ಎರಡನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಸಂಖ್ಯೆ ೧೨ (೩) (೪೭) ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಬಲ್ಲರೇ ?.

ಅ) ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳ ಆಡಳಿತವನ್ನು ಹೆಚ್ಚು ದಕ್ಷಗೊಳಿಸಲು ಯೋಗ್ಯ ಉಸ್ತುವಾರಿಗಾಗಿ ನಗರಾಡಳಿತ ನಿರ್ದೇಶನಾಲಯವನ್ನು ರಚಿಸುವ ವಿಚಾರ ಸರಕಾರಕ್ಕಿದೆಯೆ:

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಜಿ ಭೂ ಮಾಲಿಕರಿಗೆ ಪರಿಹಾರ.

ಪ್ರ ೧೩ (೪೯) ಡಾ॥ ವಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಾಜಿ ಭೂ ಮಾಲಿಕರಿಗೆ ಪರಿಹಾರ ನೀಡುವಾಗ ಕಿರುಕುಳ ಹಾಗೂ ಕಡ್ಡಾಯ ಶೇ. ಹತ್ತರಷ್ಟು ಲಂಚವನ್ನು ಭೂ ನ್ಯಾಯ ಮಂಡಳಿಯ ಸಿಬ್ಬಂದಿಯವರು ಕೇಳುತ್ತಿರುವುದು ಸರಕಾರದ ಗಮನಕ್ಕೆ ಒಂದಿಯೇ?

ಆ) ಅಂತಹ ಅಧಿಕಾರಿಗಳ ವಿರುದ್ಧ ಸರಕಾರದವರು ಎಚ್ಚರಿಕೆಯ ಕ್ರಮವನ್ನು ಕೈಕೊಂಡ ಕ್ರಮಗಳೇನು?